# ಡಾ. ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಪರಿಶಿಷ್ಟ ಜಾತಿಯವರಿಗಾಗಿ (SC) ಅನುಷ್ಟಾನಗೊಳಿಸುತ್ತಿರುವ ಯೋಜನೆಗಳ ಸಂಕ್ಷಿಪ್ತ ಮಾಹಿತಿ

---

**ಯೋಜನೆಗಳ ಸವಲತ್ತುಗಳನ್ನು ಪಡೆಯಲು ಇರಬೇಕಾದ ಅರ್ಹತೆಗಳು:**

1. ಅರ್ಜಿದಾರರು ಪರಿಶಿಷ್ಟ ಜಾತಿಗೆ ಸೇರಿದವರಾಗಿರಬೇಕು.
2. ಕಳೆದ 15 ವರ್ಷಗಳಿಂದ ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.
3. ಅರ್ಜಿದಾರರ ಕುಟುಂಬದ ಯಾವುದೇ ಸದಸ್ಯರು ಸರ್ಕಾರಿ/ಅರೆಸರ್ಕಾರಿ/ನಿಗಮ/ಮಂಡಳಿ/ಸ್ಥಳೀಯ ಸಂಸ್ಥೆಗಳಲ್ಲಿ ನೌಕರಿಯಲ್ಲಿರಬಾರದು.
4. ಅರ್ಜಿದಾರರು ಅಥವಾ ಅವರ ಕುಟುಂಬದವರು ಈ ಹಿಂದೆ ನಿಗಮದಿಂದ ಯಾವುದೇ ಸೌಲಭ್ಯ ಪಡೆದಿರಬಾರದು.
5. ಅರ್ಜಿದಾರರು ಕೈಗೊಳ್ಳಲು ಇಚ್ಛಿಸುವ ಉದ್ದೇಶï ಕಸುಬುಗಳಲ್ಲಿ ಸಾಕಷ್ಟು ಜ್ಞಾನ ಮತ್ತು ಅನುಭವ ಹೊಂದಿರಬೇಕು.
6. ಅರ್ಜಿದಾರರ ವಯಸ್ಸು 18 ರಿಂದ 60 ವರ್ಷದೊಳಗಿರಬೇಕು.
7. ಫಲಾನುಭವಿಗಳ ಆಯ್ಕೆಯನ್ನು ಸರ್ಕಾರದ ಆದೇಶ ಸಂಖ್ಯೆ ಸಕಇ128ಎಸ್‌ಡಿಸಿ 2009 ಪ್ರಕಾರ ಆಯಾ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿನ ಸಮಿತಿಯ ಮೂಲಕ ಆಯ್ಕೆ ಮಾಡಲಾಗುವುದು.

**ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳು (ಜೆರಾಕ್ಸ್ ಪ್ರತಿಗಳು):**

1. ಪಾಸ್‌ಪೋರ್ಟ್ ಸೈಜ್ ಅಳತೆಯ ಇತ್ತೀಚಿನ ಭಾವಚಿತ್ರ –2.
2. ಜಾತಿ ಪ್ರಮಾಣ ಪತ್ರ. (ತಹಶೀಲ್ದಾರ್ ರವರಿಂದ)
3. ಪ್ರಸಕ್ತ ಸಾಲಿನ ಆದಾಯ ಪ್ರಮಾಣ ಪತ್ರ. (ತಹಶೀಲ್ದಾರ್ ರವರಿಂದ) ಗ್ರಾಮೀಣ ರೂ.81,000/– & ನಗರ ಪ್ರದೇಶದವರಿಗೆ ರೂ. 1,03,000/– ಒಳಗಿರಬೇಕು.
4. ರೇಷನ್ ಕಾರ್ಡು.
5. ಡ್ರೈವಿಂಗ್ ಲೈಸನ್ಸ್ ಮತ್ತು ಬ್ಯಾಡ್ಜ್ ಹಾಗೂ ಕೋಟೇಷನ್ (ಉದ್ಯಮಶೀಲತಾ ಅಭಿವೃದ್ಧಿ ಯೋಜನೆಯಡಿ ಆಟೋರಿಕ್ಷಾ ಮತ್ತು ಪ್ಯಾಸೆಂಜರ್ / ಗೂಡ್ಸ್ ವಾಹನ ಉದ್ದೇಶಗಳಿಗೆ ಮಾತ್ರ.)
6. ತರಬೇತಿ ಹೊಂದಿದ್ದಲ್ಲಿ ಸಂಬಂಧಿಸಿದ ಪ್ರಮಾಣ ಪತ್ರಗಳು.
7. ಸಣ್ಣ ರೈತರ ಪ್ರಮಾಣ ಪತ್ರ. (ತಹಶೀಲ್ದಾರ್ ರವರಿಂದ) (ಗಂಗಾ ಕಲ್ಯಾಣ ಯೋಜನೆಗೆ ಮಾತ್ರ)
8. ಭೂ ರಹಿತ ಕೃಷಿ ಕಾರ್ಮಿಕರ ಪ್ರಮಾಣ ಪತ್ರ (ತಹಶೀಲ್ದಾರ್ ರವರಿಂದ) (ಭೂ ಒಡೆತನ ಯೋಜನೆಗೆ ಮಾತ್ರ)
9. ಪಹಣಿ ಮತ್ತು ಜಮೀನಿನ ನಕ್ಷೆ (ಗಂಗಾ ಕಲ್ಯಾಣ ಯೋಜನೆಗೆ ಮಾತ್ರ)
10. ಸಫಾಯಿ ಕರ್ಮಚಾರಿ ದೃಢೀಕರಣ ಪತ್ರ. (ನಮೂನೆ–5) (ಸಫಾಯಿ ಕರ್ಮಚಾರಿ ಯೋಜನೆಗೆ ಮಾತ್ರ)

**ಸ್ವಯಂ ಉದ್ಯೋಗ ಯೋಜನೆ:** ಈ ಯೋಜನೆಯಡಿ ರೂ. 1.00 ಲಕ್ಷದೊಳಗಿನ ಸಣ್ಣ ಪ್ರಮಾಣದ ಆರ್ಥಿಕ ಚಟುವಟಿಕೆಗಳನ್ನು ಪ್ರಾರಂಭಿಸಲು ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ ಅರ್ಜಿಗಳನ್ನು ಶಿಫಾರಸ್ಸು ಮಾಡಿ ಶೇ. 50 ಭಾಗ ಗರಿಷ್ಟ ರೂ. 35,000/– ಸಹಾಯಧನವನ್ನು ನಿಗಮದಿಂದ ಮಂಜೂರು ಮಾಡಿ ಉಳಿದ ಮೊತ್ತವನ್ನು ಗರಿಷ್ಠ ರೂ. 65,000/– ದವರೆಗೆ ಬ್ಯಾಂಕ್ ಸಾಲದ ರೂಪದಲ್ಲಿ ನೆರವು ಕೊಡಲಾಗುವುದು.

**ಕೈಗೆತ್ತಿಕೊಳ್ಳಬಹುದಾದ ಆರ್ಥಿಕ ಚಟುವಟಿಕೆಗಳು:** ಕೃಷಿಯಾಧಾರಿತ ಸಣ್ಣ ಪ್ರಮಾಣದ ಚಟುವಟಿಕೆಗಳು, ಮೀನುಗಾರಿಕೆ, ಪಾನ್ ಅಂಗಡಿ, ಚಪ್ಪಲಿ ಅಂಗಡಿ, ಬ್ಯೂಟಿಪಾರ್ಲರ್, ಗೂಡಂಗಡಿ, ಪ್ಯಾನ್ಸಿ ಸ್ಟೋರ್, ಚಾಪೆ ತಯಾರಿಕೆ, ದಿನಸಿ ಅಂಗಡಿ, ಟೈಲರಿಂಗ್ ಶಾಪ್, ಹೈನುಗಾರಿಕೆ, ಬುಟ್ಟಿ ಹೆಣೆಯುವುದು, ರೆಡಿಮೇಡ್ ಗಾರ್ಮೆಂಟ್ಸ್, ಗುಡಿಕೈಗಾರಿಕೆ, ಬಡಗಿತನ, ಮೊಬೈಲ್ ದುರಸ್ತಿ ಇತರೆ ಯಾವುದೇ ಸಣ್ಣ ವ್ಯಾಪಾರ ಇತ್ಯಾದಿ ಚಟುವಟಿಕೆಗಳು.

**ಉದ್ಯಮಶೀಲತಾ ಅಭಿವೃದ್ಧಿ ಯೋಜನೆ:** ಈ ಯೋಜನೆಯಡಿ ರೂ. 1.00 ಲಕ್ಷ ಮೇಲ್ಪಟ್ಟು ಗರಿಷ್ಠ ರೂ. 7.50 ಲಕ್ಷದವರೆಗಿನ ಘಟಕಗಳನ್ನು ಪ್ರಾರಂಭಿಸಲು ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ ಅರ್ಜಿಗಳನ್ನು ಶಿಫಾರಸ್ಸು ಮಾಡಿ ಶೇ. 33% ಭಾಗ ಗರಿಷ್ಠ ರೂ. 2.00 ಲಕ್ಷ ಸಹಾಯಧನವನ್ನು ನಿಗಮದಿಂದ ಮಂಜೂರು ಮಾಡಿ ಉಳಿದ ಮೊತ್ತವನ್ನು ಬ್ಯಾಂಕ್ ಸಾಲದ ಮುಖಾಂತರ ನೀಡಲಾಗುವುದು. ವ್ಯಾಪಾರ ಘಟಕಗಳಿಗೆ ಹೆಚ್ಚಿನ ಆದ್ಯತೆ ನೀಡದೆ ಸ್ಥಿರ ಸ್ವತ್ತುಗಳನ್ನು ಸೃಷ್ಟಿಸುವ ಉದ್ದೇಶಗಳಿಗೆ ಮಾತ್ರ ಸಹಾಯ ಮಾಡಲಾಗುವುದು.

**ಕೈಗೆತ್ತಿಕೊಳ್ಳಬಹುದಾದ ಆರ್ಥಿಕ ಚಟುವಟಿಕೆಗಳು:** ಚಪ್ಪಲಿ ಅಂಗಡಿ, ಬ್ಯೂಟಿಪಾರ್ಲರ್, ಸಾಫ್ಟ್ ಡ್ರಿಂಕ್ಸ್ ಘಟಕ, ದಿನಸಿ ಸ್ಟೇಷನರಿ ಅಂಗಡಿ, ಹೈನುಗಾರಿಕೆ, ಕೋಳಿ ಸಾಕಾಣಿಕೆ, ಹಂದಿಸಾಕಾಣಿಕೆ, ವಕೀಲರ ಕಛೇರಿ, ಇಲೆಕ್ಟ್ರಿಕಲ್ ಶಾಪ್, ರೆಡಿಮಡ್ ಗಾರ್ಮೆಂಟ್ಸ್, ಆಟೋರಿಕ್ಷಾ, ಗೂಡ್ಸ್ ಕ್ಯಾರಿಯರ್, ಪ್ಯಾಸೆಂಜರ್ ಕಾರ್, ಸಿಮೆಂಟ್ ಬ್ರಿಕ್ ಇಟ್ಟಿಗೆ, ಹಾಗೂ ಇತರೆ ಯಾವುದೇ ಲಾಭದಾಯಕ ಸಣ್ಣ ಕೈಗಾರಿಕೆ, ವ್ಯಾಪಾರ ಉದ್ದಿಮೆ ಪ್ರಾರಂಭಿಸಲು/ ಸೇವಾ ಘಟಕ.

**ಹೈನುಗಾರಿಕೆ ಯೋಜನೆ:** ಈ ಯೋಜನೆಯಡಿ 2 ಮಿಶ್ರತಳಿ ಹಸುಗಳನ್ನು ಖರೀದಿಸಿ ಹೈನುಗಾರಿಕೆ ಚಟುವಟಿಕೆಯನ್ನು ಪ್ರಾರಂಭಿಸಲು ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ ಅರ್ಜಿಗಳನ್ನು ಶಿಫಾರಸ್ಸು ಮಾಡಿ ರೂ.82,000/- ದಿಂದ 1,02,000/- ಘಟಕವೆಚ್ಚದಲ್ಲಿ ಶೇ. 50 ಸಹಾಯಧನ ಗರಿಷ್ಠ ರೂ. 50,000/- ಗಳನ್ನು ನಿಗಮದಿಂದ ಮಂಜೂರು ಮಾಡಿ ಉಳಿದ ಮೊತ್ತವನ್ನು ಬ್ಯಾಂಕ್ ಸಾಲದ ಮುಖಾಂತರ ನೀಡಲಾಗುವುದು. ಮೊದಲಿಗೆ ಒಂದು ಹಸುಕೊಳ್ಳಲು ಆರ್ಥಿಕ ನೆರವು ನೀಡಿ 6 ತಿಂಗಳ ನಂತರ ಘಟಕ ನಿರ್ವಹಣೆ ಮತ್ತು ಸಾಲ ಮರುಪಾವತಿ ಅಂಶಗಳನ್ನು ಪರಿಗಣಿಸಿ ಎರಡನೇ ಹಸುವನ್ನು ಖರೀದಿಸಲು ಹಣ ಬಿಡುಗಡೆ ಮಾಡಲಾಗುವುದು.

**ಗಂಗಾ ಕಲ್ಯಾಣ ವೈಯಕ್ತಿಕ ನೀರಾವರಿ ಯೋಜನೆ:** ಈ ಯೋಜನೆಯಡಿ ಕನಿಷ್ಠ 1.00 ರಿಂದ 5.00 ಎಕರೆಯೊಳಗೆ ಖುಷ್ಕಿ ಜಮೀನು ಹೊಂದಿರುವ ಸಣ್ಣ ರೈತರಿಗೆ ಕೊಳವೆ ಬಾವಿ/ತೆರೆದ ಬಾವಿ, ಪಂಪ್ ಮತ್ತು ಇತರೆ ಸಲಕರಣೆಗಳನ್ನು ಅಳವಡಿಸಿ ವಿದ್ಯುತ್ ಸಂಪರ್ಕವನ್ನು ಕೊಡಿಸಲಾಗುವುದು. ಘಟಕ ವೆಚ್ಚ ರೂ. 2.00 ಲಕ್ಷ. ಸಹಾಯಧನ ರೂ. 1.50 ಲಕ್ಷ ಹಾಗೂ ಅವಧಿಸಾಲ ರೂ. 0.50 ಲಕ್ಷ. (ಅವಧಿಸಾಲವನ್ನು ಶೇ.6ರ ಸರಳಬಡ್ಡಿ ದರದಲ್ಲಿ 8 ಅರ್ಧ ವಾರ್ಷಿಕ ಕಂತುಗಳಲ್ಲಿ ನಿಗಮಕ್ಕೆ ಮರುಪಾವತಿ ಮಾಡಬೇಕು)

**ಗಂಗಾ ಕಲ್ಯಾಣ ಏತ ನೀರಾವರಿ ಯೋಜನೆ:** ಈ ಯೋಜನೆಯಡಿ ಪರಿಶಿಷ್ಟ ಜಾತಿಯ ಸಣ್ಣ ಮತ್ತು ಅತೀ ಸಣ್ಣ ರೈತರ ಜಮೀನುಗಳಿಗೆ ಏತ ನೀರಾವರಿ ಮೂಲಕ ನೀರಾವರಿ ಸೌಲಭ್ಯ ಕಲ್ಪಿಸಲಾಗುತ್ತದೆ. ಈ ಯೋಜನೆಯಡಿ ಘಟಕ ವೆಚ್ಚದ ಪೂರ್ಣ ಮೊತ್ತವು ಸಹಾಯಧನವಾಗಿರುತ್ತದೆ. ಸದಾ ಕಾಲ ಹರಿಯುತ್ತಿರುವ ನದಿ, ನೈಸಗಿಕ ಹಳ್ಳ ತೊರೆಗಳ ಸಮೀಪದಲ್ಲಿ ಪರಿಶಿಷ್ಠ ಜಾತಿಗೆ ಸೇರಿದ ಫಲಾಪೇಕ್ಷಿಗಳ ಜಮೀನಿರಬೇಕು. ಕನಿಷ್ಠ 3 ಜನ ಫಲಾಪೇಕ್ಷಿಗಳು 8.00 ಎಕರೆ ಜಮೀನನ್ನು ಒಂದೇ ಕಡೆ ಹೊಂದಿದ್ದಲ್ಲಿ ರೂ. 4.00 ಲಕ್ಷಗಳ ಸಹಾಯಧನದೊಂದಿಗೆ ಪೈಪ್ ಲೈನ್ ಜೋಡಿಸಿ ಪಂಪುಸೆಟ್ ಅಳವಡಿಸಿ, ಘಟಕವನ್ನು ವಿದ್ಯುದ್ದೀಕರಣಗೊಳಿಸಲಾಗುವುದು. ಕನಿಷ್ಠ 5 ಜನ ಫಲಾಪೇಕ್ಷಿಗಳು 15.00 ಎಕರೆ ಜಮೀನನ್ನು ಒಂದೇ ಕಡೆ ಹೊಂದಿದಲ್ಲಿ ರೂ. 6.00 ಲಕ್ಷಗಳ ಸಹಾಯಧನದೊಂದಿಗೆ ಪಂಪುಸೆಟ್ ಅಳವಡಿಸಿ ಘಟಕವನ್ನು ವಿದ್ಯುದ್ದೀಕರಣಗೊಳಿಸಲಾಗುವುದು. 15 ಎಕರೆ ಮೇಲ್ಪಟ್ಟ ಜಮೀನುಗಳಿಗೆ ಎಕರೆಯೊಂದಕ್ಕೆ ರೂ.40,000/- ಮಿತಿಯೊಳಗೆ ಅನುಷ್ಠಾನಗೊಳಿಸಲಾಗುವುದು.

**ಭೂ ಒಡೆತನ ಯೋಜನೆ:** ಈ ಯೋಜನೆಯಡಿ ಭೂ ರಹಿತ ಮಹಿಳಾ ಕೃಷಿ ಕಾರ್ಮಿಕರಿಗೆ ತಮ್ಮ ವಾಸಸ್ಥಳದಿಂದ 5 ಕಿ. ಮೀ. ವ್ಯಾಪ್ತಿಯೊಳಗೆ ಕೃಷಿಗೆ ಯೋಗ್ಯವಾದ 2.00 ಎಕರೆ ಖುಷ್ಕಿ ಅಥವಾ 1.00 ಎಕರೆ ತರಿ/ ಭಾಗಾಯ್ತು ಜಮೀನನ್ನು ಪರಿಶಿಷ್ಟ ಜಾತಿ/ ಪಂಗಡದವರನ್ನು ಹೊರತುಪಡಿಸಿ ಉಳಿದ ಕೋಮಿನವರಿಂದ ಖರೀದಿಸಲು ಸಹಾಯಧನ ಮತ್ತು ಸಾಲ ಒದಗಿಸಲಾಗುವುದು. ಘಟಕ ವೆಚ್ಚ ಗರಿಷ್ಠ ರೂ. 10.00 ಲಕ್ಷಗಳು. ಘಟಕ ವೆಚ್ಚದ ಶೇ.50 ರಷ್ಟು ಸಹಾಯಧನ ಉಳಿದ ಶೇ.50 ರಷ್ಟು ಅವಧಿಸಾಲವಾಗಿರುತ್ತದೆ. (ಅವಧಿಸಾಲಕ್ಕೆ ಶೇ.6 ರಂತೆ ವಾರ್ಷಿಕ ಸರಳಬಡ್ಡಿಯನ್ನು ವಿಧಿಸಲಾಗುವುದು. 10 ವಾರ್ಷಿಕ ಕಂತುಗಳಲ್ಲಿ ಸಾಲ ಮತ್ತು ಬಡ್ಡಿ ಮರುಪಾವತಿ ಮಾಡಬೇಕು)

**ಮೈಕ್ರೋ ಫೈನಾನ್ಸ್ ಯೋಜನೆ (ಕಿರುಸಾಲ):** ಈ ಯೋಜನೆಯಡಿ ಸ್ವ ಸಹಾಯ ಸಂಘದ ಗುಂಪುಗಳಿಗೆ ಸೇರಿದ ಪ್ರತಿ ಫಲಾನುಭವಿಗೆ ಸಣ್ಣ ಪ್ರಮಾಣದ ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳಲು ರೂ. 15,000/- ಘಟಕ ವೆಚ್ಚದಲ್ಲಿ

ರೂ. 10,000/– ಸಹಾಯಧನ ಹಾಗೂ ರೂ. 5,000/– ಬೀಜಧನ ಸಾಲ ಸೌಲಭ್ಯ ಕಲ್ಪಿಸಲಾಗುವುದು. ಬೀಜಧನ ಸಾಲವನ್ನು ಶೇ. 4 ರ ಬಡ್ಡಿ ದರದಲ್ಲಿ 36 ಕಂತುಗಳಲ್ಲಿ ಮರುಪಾವತಿ ಮಾಡಬೇಕು.

**ಸಫಾಯಿ ಕರ್ಮಚಾರಿ ಪುನರ್ವಸತಿ ಯೋಜನೆ:** ಈ ಯೋಜನೆಯಡಿ ನಗರಾಭಿವೃದ್ಧಿ ಇಲಾಖೆ/ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳ ಮುಖೇನ ಗುರುತಿಸಿ ಜಿಲ್ಲಾಧಿಕಾರಿಗಳು/ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್‌ನ ಅಧ್ಯಕ್ಷತೆಯಲ್ಲಿರುವ ಸಮಿತಿಯಿಂದ ಅನುಮೋದಿತವಾದ ಸಫಾಯಿ ಕರ್ಮಚಾರಿ ಮತ್ತು ಅವರ ಅವಲಂಬಿತರು ಈ ಯೋಜನೆಯಡಿ ಪರ್ಯಾಯ ಉದ್ಯೋಗ ಕೈಗೊಳ್ಳಲು ಆರ್ಥಿಕ ಚಟುವಟಿಕೆಗಳಿಗಾಗಿ ಸಾಲ ಸೌಲಭ್ಯ ಪಡೆಯಬಹುದು. ರಾಷ್ಟ್ರೀಕೃತ/ಗ್ರಾಮೀಣ/ಶೆಡ್ಯೂಲ್ಡ್ ಬ್ಯಾಂಕುಗಳ ಸಹಯೋಗದೊಡನೆ ರೂ. 1.00ಲಕ್ಷದವರೆಗೆ ವಿವಿಧ ಆರ್ಥಿಕ ಚಟುವಟಿಕೆಗಳನ್ನು ಪ್ರಾರಂಭಿಸಿ ಸ್ವಯಂ ಉದ್ಯೋಗ ಕೈಗೊಳ್ಳಲು ಘಟಕ ವೆಚ್ಚದ ಶೇ.50 ರಷ್ಟು ಅಥವಾ ಗರಿಷ್ಠ ರೂ. 25,000/– ಸಹಾಯಧನ ಹಾಗೂ ಉಳಿದ ಮೊತ್ತವನ್ನು ಬ್ಯಾಂಕ್ ಸಾಲದೊಂದಿಗೆ ನೀಡಲಾಗುತ್ತದೆ. ರಾಷ್ಟ್ರೀಯ ಸಫಾಯಿ ಕರ್ಮಚಾರಿ ಹಣಕಾಸು ಅಭಿವೃದ್ಧಿ ನಿಗಮದ ಸಹಯೋಗದೊಡನೆ ನೇರಸಾಲವಾಗಿ ರೂ. 1.00 ಲಕ್ಷದ ಮಿತಿಯೊಳಗಿನ ಘಟಕಗಳಿಗೆ ಶೇ.50 ರಷ್ಟು ಅಥವಾ ಗರಿಷ್ಠ ರೂ. 10,000/– ಸಹಾಯಧನ ಹಾಗೂ ಉಳಿದ ಮೊತ್ತ ಅವಧಿಸಾಲವಾಗಿರುತ್ತದೆ. ರೂ. 1.00 ಲಕ್ಷ ಮೇಲ್ಪಟ್ಟ ಘಟಕಗಳಿಗೆ ಶೇ.5 ರ ಬೀಜಧನ, ಶೇ.5ರ ಫಲಾನುಭವಿಗಳ ವಂತಿಗೆ ಹಾಗೂ ಉಳಿದ ಶೇ.90 ರ ಅವಧಿ ಸಾಲದೊಂದಿಗೆ ಆರ್ಥಿಕ ನೆರವು ನೀಡಿ ವಿವಿಧ ಅರ್ಥಿಕ ಚಟುವಟಿಕೆಗಳನ್ನು ಪ್ರಾರಂಭಿಸಲು ಅನುಷ್ಠಾನಗೊಳಿಸಲಾಗುತ್ತಿದೆ. ಸ್ವ ಸಹಾಯ ಸಂಘದ ಸದಸ್ಯರಿಗೆ ಸಣ್ಣ ಪ್ರಮಾಣದ ಅರ್ಥಿಕ ಚಟುವಟಿಕೆಗಳನ್ನು ಪ್ರಾರಂಭಿಸಲು ನಗರಾಭಿವೃದ್ಧಿ ಇಲಾಖೆಯು ನೀಡುವ ಸಹಾಯಧನದೊಂದಿಗೆ ಅವಧಿ ಸಾಲ ನೀಡಲಾಗುತ್ತದೆ.

**ಸ್ವಯಂ ಉದ್ಯೋಗಕ್ಕಾಗಿ ಅಂಗವಿಕಲರಿಗೆ ನೆರವು:** ಈ ಯೋಜನೆಯಡಿ ಶೇ. 40 ರಿಂದ 60 ಅಂಗವಿಕಲತೆ ಇರುವ ವಿಕಲಚೇತನರಿಗೆ ಸಣ್ಣ ಪ್ರಮಾಣದ ಆರ್ಥಿಕ ಚಟುವಟಿಕೆಗಳನ್ನು ಪ್ರಾರಂಭಿಸಲು ಯೋಜನಾ ವೆಚ್ಚ ರೂ. 25,000/–ದಲ್ಲಿ ರೂ. 10,000/– ಸಹಾಯಧನ ಹಾಗೂ ರೂ. 15,000/– ಅವಧಿಸಾಲವನ್ನು ಶೇ.5% ಬಡ್ಡಿ ದರದಲ್ಲಿ ನೀಡಲಾಗುವುದು.

**ಮೈಕ್ರೋ ಕ್ರೆಡಿಟ್ –1 ಯೋಜನೆ:** ಈ ಯೋಜನೆಯಡಿ ಸಣ್ಣ ಪ್ರಮಾಣದ ಆರ್ಥಿಕ ಚಟುವಟಿಕೆ ಪ್ರಾರಂಭಿಸಲು ರೂ. 10,000/–ಸಹಾಯಧನ ಹಾಗೂ ರೂ. 15,000/– ಅವಧಿಸಾಲವನ್ನು ಶೇ.5% ಬಡ್ಡಿ ದರದಲ್ಲಿ ನೀಡಲಾಗುವುದು.

**ಮಹಿಳಾ ಸಮೃದ್ಧಿ ಯೋಜನೆ :** ಈ ಯೋಜನೆಯಡಿ ಮಹಿಳಾ ಫಲಾಪೇಕ್ಷಿಗಳಿಗೆ ವೈಯಕ್ತಿಕವಾಗಿ ಸಣ್ಣ ಪ್ರಮಾಣದ ಆರ್ಥಿಕ ಚಟುವಟಿಕೆ ಪ್ರಾರಂಭಿಸಲು ರೂ. 10,000/– ಸಹಾಯಧನ ಹಾಗೂ ರೂ. 15,000/– ಅವಧಿಸಾಲವನ್ನು ಶೇ.5% ಬಡ್ಡಿ ದರದಲ್ಲಿ ನೀಡಲಾಗುವುದು.

*****